# ಲಂಕೇಶ್ ಅವರ ಸಣ್ಣಕತೆ ಮತ್ತು ಲೋಹಿಯಾ ಅವರ ಸಮಾನತೆಯ ಚಿಂತನೆ

**ಎನ್. ಎಸ್. ಸತೀಶ್**
ಪ್ರಾಂಶುಪಾಲರು
ಶೇಷಾದ್ರಿಪುರಂ ಸಂಜೆ ಕಾಲೇಜು
ಬೆಂಗಳೂರು.

**Article Link: https://aksharasurya.com/2024/01/n-s-satish/**

## ABSTRACT:

ಭಾರತದ ಸನ್ನಿವೇಶಕ್ಕೆ ಅನುಗುಣವಾದ ಸಮಾಜವಾದದ ಪ್ರತಿಪಾದನೆ ಮಾಡಿದ ವಿಶಿಷ್ಟ ಚಿಂತಕರಲ್ಲಿ ಡಾ. ರಾಮಮನೋಹರ ಲೋಹಿಯಾ ಅವರು ಪ್ರಮುಖರು. ಸ್ವಾತಂತ್ರ್ಯಪೂರ್ವದಲ್ಲಿಯೇ ಅಂದಿನ ಮುಂಚೂಣಿ ನಾಯಕರುಗಳ ಜೊತೆಗೆ ಮುಂದೆ ಭಾರತ ಎದುರಿಸಬೇಕಾದ ಸಮಸ್ಯೆಗಳ ಬಗೆಗೆ ಲೋಹಿಯಾ ಚರ್ಚೆ ನಡೆಸುತ್ತಿದ್ದರು. ಭಾರತೀಯ ಸಮಾಜವಾದಿ ಚಳುವಳಿಯ ಪ್ರಶ್ನಾತೀತ ನಾಯಕರಾಗಿ ಹೊರಹೊಮ್ಮಿದರು. ವಸಾಹತುಶಾಹಿಯ ಪ್ರಭಾವದಿಂದ ಸ್ವತಂತ್ರ ಭಾರತದಲ್ಲಿಯೂ ಸಮಾಜಿಕ ಅಸಮಾನತೆ ಹೆಚ್ಚಾಗಿದ್ದನ್ನು ಮನಗಂಡ ಲೋಹಿಯಾ ಅವರು ಸಮಾನತೆಯ ತತ್ವವನ್ನು ತಮ್ಮ ಚಿಂತನೆಯ ತಳಹದಿಯಾಗಿಸಿದ್ದಾರೆ. ಮಾರ್ಕ್ಸ್, ಗಾಂಧಿ, ಅಂಬೇಡ್ಕರ್, ಲೋಹಿಯಾ ಮುಂತಾದವರ ಚಿಂತನೆಗಳು ಕನ್ನಡ ಸಾಹಿತಿಗಳ ಮೇಲೆ ಹೆಚ್ಚಿನ ಪ್ರಭಾವ ಬೀರುವುದರೊಂದಿಗೆ ಅವರ ಸಾಹಿತ್ಯ ಸೃಷ್ಟಿಯಲ್ಲಿ ಬಿಂಬಿತವಾಗಿರುವುದು ಸ್ಪಷ್ಟವಾಗಿ ಕಾಣಸಿಗುತ್ತದೆ. ಲೋಹಿಯಾ ಅವರು ಕರ್ನಾಟಕದ ಕಾಗೋಡಿಗೆ ಬಂದು ಕಾಗೋಡು ಸತ್ಯಾಗ್ರಹದಲ್ಲಿ ಭಾಗಿಯಾಗಿ ಜೈಲುವಾಸವನ್ನು ಅನುಭವಿಸಿದ ಮೇಲೆ ಕರ್ನಾಟಕದಲ್ಲಿ ಅವರ ಚಿಂತನೆಯ ಪ್ರಭಾವ ಹೆಚ್ಚಾಯಿತು. ಸಮಾನತೆಯು ಎಲ್ಲಾ ರಂಗಗಳಲ್ಲೂ ಅಸ್ತಿತ್ವಕ್ಕೆ ಬರಬೇಕೆನ್ನುವ ಲೋಹಿಯಾ ಅವರು ಸಮಾನತೆಯ ಬಗ್ಗೆ ತಮ್ಮ ಚಿಂತನೆಯನ್ನು ಪ್ರತಿಪಾದಿಸುತ್ತಾರೆ. ಲೋಹಿಯಾ ಅವರ ಚಿಂತನೆಗಳ ಪ್ರಭಾವಕ್ಕೆ ಒಳಗಾದ ಕನ್ನಡ ಸಾಹಿತಿಗಳಲ್ಲಿ ಲಂಕೇಶರು ಒಬ್ಬರು. ಲೋಹಿಯಾ ಚಿಂತನೆಗಳನ್ನು ತಮ್ಮ ಕತೆಗಳ ಮೂಲಕ ಸಹೃದಯರಲ್ಲಿ ಚಿಂತನೆಗೆ ಒಳಗುಮಾಡುವ, ಅವರಲ್ಲಿ ಜಾಗೃತಿ ಉಂಟಾಗಿಸುವ ಹಾಗೂ ಜವಾಬ್ದಾರಿಯನ್ನು ಮೂಡಿಸುವುದರೊಂದಿಗೆ ಸಮಾಜದ ಆರೋಗ್ಯವನ್ನು ಸದೃಢಗೊಳಿಸುವ ಪ್ರಾಮಾಣಿಕ ಪ್ರಯತ್ನ ಲಂಕೇಶರು ಮಾಡಿರುವುದು ಕಂಡುಬರುತ್ತದೆ. ಲಂಕೇಶರು ಲೋಹಿಯಾ ಅವರ ಸಮಾನತೆಯ ಪರಿಕಲ್ಪನೆಯನ್ನು ತಮ್ಮ ಕೆಲವು ಸಣ್ಣಕತೆಗಳಲ್ಲಿ ವ್ಯಕ್ತ ಪಡಿಸಿರುವ ಅಂಶಗಳನ್ನು ಅನಾವರಣಗೊಳಿಸಿರುವ ಉದ್ದೇಶ ಈ ಲೇಖನದ್ದಾಗಿದೆ.

**KEY WORDS:**

ಸಮಾಜವಾದ, ಡಾ. ರಾಮಮನೋಹರ ಲೋಹಿಯಾ, ಸಮಾನತೆ, ನವ್ಯ ಸಾಹಿತ್ಯ, ಲಂಕೇಶ್, ಸಮಾನತೆಯ ಪರಿಕಲ್ಪನೆ, ಸಣ್ಣಕತೆ.

'ಸಮಾನತೆ' ಎಂಬದು ಜಗತ್ತಿನ ಸಕಲ ಜೀವರಾಶಿಗಳಿಗೆ ಅನ್ವಯಿಸುವಂತಹ ಒಂದು ಮೂಲಭೂತ ಪರಿಕಲ್ಪನೆ ಹಾಗೂ ಹಕ್ಕು ಎಂದರೆ ತಪ್ಪಲ್ಲ. ಎಲ್ಲರಿಗೂ ಒಂದೇ ರೀತಿಯ ಅವಕಾಶಗಳನ್ನು ಒದಗಿಸುವುದು ಎಂಬ ವಿಶಾಲ ಅರ್ಥವನ್ನು ಸಮಾನತೆ ಪಡೆದುಕೊಂಡಿದೆ. ಪ್ರಾಣಿ ಜಗತ್ತಿನಲ್ಲಿ ಡಾರ್ವಿನ್ ಹೇಳುವ ಹಾಗೆ ಅಸ್ತಿತ್ವವಾದ ಅಂದರೆ 'ಸರ್ವೈವಲ್ ಆಫ್ ದ ಫಿಟೆಸ್ಟ್' ಎಂಬುದು ಕಂಡುಬರುತ್ತದೆ. ಮಾನವ ಕುಲದಲ್ಲಿ ನಾಗರೀಕತೆ ಹೆಚ್ಚಾದಂತೆಲ್ಲಾ ಈ ಸಮಾನತೆಯ ಅಂಶ ದೂರವಾಗುತ್ತಿರುವುದು ದುರದೃಷ್ಟಕರ ಸಂಗತಿಯಾಗಿದೆ.

ಸಮಾಜದ ಪ್ರತಿಯೊಬ್ಬರೂ ಒಂದೇ ರೀತಿಯ ಹಕ್ಕುಗಳನ್ನು ಹೊಂದುವ ಪರಿಸ್ಥಿತಿ ಹಾಗೂ ಹಕ್ಕುಗಳ ಮೂಲಕ ಏಳಿಗೆಗೆ ಸಮಾನ ಅವಕಾಶವನ್ನು ಪಡೆಯುವುದನ್ನು ಸಮಾನತೆ ಎನ್ನಬಹುದು. ಸಮಾನತೆ ಮಾನವನ ಮೂಲಭೂತ ಹಕ್ಕು. ಪ್ರಜಾಪ್ರಭುತ್ವದ ರಾಷ್ಟ್ರಗಳ ತಾತ್ವಿಕ ತಳಹದಿಯೇ ಸಮಾನತೆ ಎಂದರೆ ತಪ್ಪಲ್ಲ. ಭಾರತೀಯ ಸಂವಿಧಾನದ ತಳಹದಿ ಪ್ರಜಾಪ್ರಭುತ್ವವಾದುದರಿಂದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಾನತೆಯನ್ನು ಬಯಸುತ್ತದೆ.

ಭಾರತ ಕಂಡಂತಹ ಸಮಾಜವಾದಿ ನಾಯಕರಲ್ಲಿ ಡಾ. ರಾಮಮನೋಹರ ಲೋಹಿಯಾ ಅವರು ಪ್ರಮುಖರು ಎಂಬುದು ಪ್ರಶ್ನಾತೀತವಾದ ವಿಚಾರ. ಕೇವಲ ಸಮಾಜವಾದಿ ಎಂದು ಬಿಂಬಿತವಾಗದೆ, ಸ್ವಾತಂತ್ರ್ಯ ಹೋರಾಟಗಾರ, ಮಾನವತಾವಾದಿ, ಉತ್ತಮ ರಾಜಕಾರಣಿ, ಶ್ರೇಷ್ಠ ಲೇಖಕ ಹಾಗೂ ಸಾಂಸ್ಕೃತಿ ಕ ಚಿಂತಕ ಎಂಬ ವಿಶೇಷಣಗಳ ಓರ್ವ ಅಪರೂಪದ ತತ್ವಜ್ಞಾನಿ ಡಾ. ರಾಮಮನೋಹರ ಲೋಹಿಯಾ ಎಂದರೆ ತಪ್ಪಲ್ಲ. ಆಧುನಿಕ ಭಾರತ ಎದುರಿಸಿದ ಬಹುತೇಕ ಸಮಸ್ಯೆಗಳಿಗೆ ಅದರದೇ ಆದ ಸಮಾಜವಾದದ ಅವಶ್ಯಕತೆಯನ್ನು ಮನಗಂಡ ಕ್ರಿಯಾತ್ಮಕ ಸಮಾಜವಾದಿಯಾಗಿ ಕಾಣಿಸಿಕೊಳ್ಳುತ್ತಾರೆ ಲೋಹಿಯಾ. ಇವರ ಚಿಂತನೆಗಳಲ್ಲಿ ಚರಿತ್ರೆ, ಅರ್ಥಶಾಸ್ತ್ರ, ರಾಜಕೀಯ ಸಿದ್ಧಾಂತ, ಸಂಸ್ಕೃತಿ ಜಿಜ್ಞಾಸೆ, ಪರಿಸರ ಚಿಂತನೆ, ಸೌಂದರ್ಯ ಮೀಮಾಂಸೆ, ಕಲೆ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಲೋಹಿಯಾರ ಪ್ರೌಢಪಾಂಡಿತ್ಯವನ್ನು ಕಾಣಬಹುದಾಗಿದೆ.

ಲೋಹಿಯಾ ಅವರ ಜೀವನವನ್ನು ಸಂಕ್ಷಿಪ್ತವಾಗಿ ನೋಡುವುದಾದರೆ

1910ರ ಮಾರ್ಚ್ 23ರಂದು ಪ್ರಸ್ತುತ ಉತ್ತರ ಪ್ರದೇಶದ ಫೈಜ಼ಾಬಾದ್ ಜಿಲ್ಲೆಯ ಅಕ್ಬರಪುರ ಎಂಬ ಊರಿನಲ್ಲಿ ಜನಿಸಿದರು. ಇವರ ಪೂರ್ವಿಕರಾದ ಲಾಲಾ ಮನ್‌ಸುಖ್‌ರಾಮ್ ಅವರು ಮಿರಜಾಪುರದಲ್ಲಿ ಸುಪ್ರಸಿದ್ಧ ಕಬ್ಬಿಣ ಮತ್ತು ಬಟ್ಟೆಯ ವ್ಯಾಪಾರಿಗಳಾಗಿದ್ದರು. ಆ ಸಂದರ್ಭದಲ್ಲಿ ಅವರನ್ನು 'ಲೋಹಿಯಾ' ಎಂದು ಕರೆಯತೊಡಗಿದರು. ಹಿಂದಿಯಲ್ಲಿ ಕಬ್ಬಿಣ ಎನ್ನುವುದಕ್ಕೆ 'ಲೋಹ' ಎಂದು ಕರೆಯುತ್ತಿದರು. ಹಾಗಾಗಿ ಇವರ ಕುಟುಂಬಕ್ಕೆ ಲೋಹಿಯಾ ಎಂಬ ಹೆಸರು ಸೇರಿಕೊಂಡಿದೆ. ಲೋಹಿಯಾ ಅವರ ಪ್ರಾಥಮಿಕ ಶಿಕ್ಷಣ ಅಕ್ಬರ್‌ಪುರದ ಟಂಡನ್ ಶಾಲೆಯಲ್ಲಿ ನಡೆದು, ವಾರಣಾಸಿಯ ಕಾಶಿ ವಿಶ್ವವಿದ್ಯಾಲದಲ್ಲಿ ಇಂಟರ್ ಮುಸಿಗಿ, ಪದವಿ ಶಿಕ್ಷಣಕ್ಕೆ ಕಲ್ಕತ್ತೆಯ ವಿದ್ಯಾಸಾಗರ್ ಕಾಲೇಜಿಗೆ ಸೇರಿ 1928ರಲ್ಲಿ ಬಿ.ಎ. ಪರೀಕ್ಷೆಯಲ್ಲಿ ತೇರ್ಗಡೆಯಾದರು. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಬರ್ಲಿನ್ ಫ್ರೀಡ್ರಿಶ್ ವಿಲ್ ಹೆಮ್ಸ್ ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದರು. 1932ರಲ್ಲಿ ವಿಲ್ ಹೆಮ್ಸ್ ವಿಶ್ವವಿದ್ಯಾಲಯಕ್ಕೆ 'ಉಪ್ಪಿನ ಸತ್ಯಾಗ್ರಹ ಮತ್ತು ನಾಗರೀಕ ಕಾನೂನು ಭಂಗ' ಎನ್ನುವ ಸಂಶೋಧನಾ ಪ್ರಬಂಧವನ್ನು ಮಂಡಿಸಿ, ಡಾಕ್ಟರೇಟ್ ಪದವಿಯನ್ನು ಪಡೆದರು. ಡಾ. ರಾಮಮನೋಹರ ಲೋಹಿಯಾ ಅವರ ಬರಹಗಳು ಹಿಂದಿ ಹಾಗೂ ಇಂಗ್ಲೀಷ್ ಭಾಷೆಯಲ್ಲಿ ರಚಿತವಾಗಿದೆ. ಹಿಂದಿಯಲ್ಲಿ ಸುಮಾರು ಹದಿಮೂರು ಕೃತಿಗಳು ರಚಿಸಿದ್ದು, ಇಂಗ್ಲೀಷಿನಲ್ಲಿ ಒಟ್ಟು ಹದಿನಾಲ್ಕು ಕೃತಿಗಳು ರಚಿಸಿದ್ದಾರೆ.

ಭಾರತಕ್ಕೆ ತನ್ನದೇ ಆದ ಸಮಾಜವಾದದ ಪ್ರತಿಪಾದನೆ ಮಾಡಿದ ವಿಶಿಷ್ಟ ಸಮಾಜವಾದಿ ಡಾ. ರಾಮಮನೋಹರ ಲೋಹಿಯಾ. ಭಾರತವು ರಾಜಕೀಯವಾಗಿ ಸ್ವಂತ ಅಸ್ತಿತ್ವ ಪಡೆದ ಅನಂತರವೂ ಆಡಳಿತವು ವಸಾಹತುಶಾಹಿ ಆಡಳಿತಕ್ಕಿಂತ ಹೆಚ್ಚೇನು ಭಿನ್ನವಾಗಿರಲಿಲ್ಲ. ಮೇಲುನೋಟಕ್ಕೆ ಪ್ರಜಾಪ್ರಭುತ್ವವಾಗಿದ್ದರೂ ಜನರಿಗೆ ಅನುಕೂಲವಾಗುವಂತಹ ನಿಬಂಧನೆಗಳು ಬರಲೇಯಿಲ್ಲ ಎಂಬುದು ದುರಂತವಾದ ವಿಷಯ. ಇದರ ವಿರುದ್ಧವಾಗಿ ಲೋಹಿಯಾ ಚಿಂತನೆಗಳು ಮೂಡಿರುವುದರಿಂದ ಅವರ ಭಾರತೀಯ ಸಮಾಜವಾದಿ ಚಿಂತನೆಗಳು ಹೆಚ್ಚಿನ ಮಹತ್ವ ಪಡೆದುಕೊಳ್ಳುತ್ತದೆ. ವಸಾಹತುಶಾಹಿಯ ವಿರುದ್ದ ಸ್ವತಂತ್ರ ಪೂರ್ವದಲ್ಲಿ ಹೋರಾಡಿದಂತೆ ಸ್ವಾತಂತ್ರ್ಯಾ ನಂತರವೂ ಹೋರಾಡುವ ಪರಿಸ್ಥಿತಿ ಭಾರತದಲ್ಲಿ ಸೃಷ್ಟಿಯಾದದ್ದು ಒಂದು ವಿಪರ್ಯಾಸ ಎಂದು ಲೋಹಿಯಾ ಅವರು ತಮ್ಮ ಅನೇಕ ಭಾಷಣಗಳಲ್ಲಿ ಪ್ರಭುತ್ವದ ವಿರುದ್ಧ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸುತ್ತಾರೆ. 'ರಾಮಮನೋಹರ ಲೋಹಿಯಾ ನಿಸ್ಸಂದೇಹವಾಗಿ ಆಧುನಿಕ ಭಾರತ ಉತ್ಪಾದಿಸಿದ ಸೃಷ್ಟಿಶೀಲ ಚಿಂತಕರಲ್ಲಿ ಒಬ್ಬರು'. ಲೋಹಿಯಾ ಅವರ ಬಹುಪಾಲು ಚಿಂತನೆಗಳು ವಾಸ್ತವ ತಿಳುವಳಿಕೆ ಹಾಗೂ ಆಧ್ಯಾತ್ಮಿಕ ಒಳನೋಟದಿಂದಲೇ ಲೋಹಿಯಾ ಅವರ

ಚಿಂತನೆಗಳು ಅಂದಿನ ಇತರ ಸಮಾಜವಾದಿ ಚಿಂತಕರಿಗಿಂತ ವಿಭಿನ್ನವಾಗಿದೆ. ಮೇಲುನೋಟಕ್ಕೆ ಗಾಂಧೀಜಿ ಅವರ ಶಿಷ್ಯರೆನಿಸಿಕೊಂಡಿದ್ದರೂ ಹಲವು ಬಾರಿ ಗಾಂಧಿ ಚಿಂತನೆಗೆ ವಿಭಿನ್ನವಾಗಿ ಆಲೋಚಿಸಿ, ಗಾಂಧೀಜಿಗೆ ನೇರವಾಗಿ ಹೇಳಿರುವ ವ್ಯಕ್ತಿತ್ವ ಲೋಹಿಯಾ ಅವರದು. ಬಂಡವಾಳಶಾಹಿಯ ಅಪರಿಪೂರ್ಣತೆಯ ಬಗ್ಗೆ ಲೋಹಿಯಾ "ಮಾರ್ಕ್ಸ್ ಬಂಡವಾಳಶಾಹಿಯನ್ನು ಅದರ ಆಂತರಿಕ ಚಲನೆಯಲ್ಲಿ ಮಾತ್ರ ಗ್ರಹಿಸುತ್ತಾನೆ ಹಾಗೂ ಅದರ ಬಾಹ್ಯ ಅಥವಾ ಸಾಮ್ರಾಜ್ಯಶಾಹಿ ಚಲನೆಯನ್ನು ಆತ ಸಂಪೂರ್ಣವಾಗಿ ನಿರ್ಲಕ್ಷಿಸಿದ್ದಾನೆ" ಎಂದು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾರೆ. ಕೇವಲ ಭಾರತೀಯ ಸಮಾಜವಾದಕ್ಕೆ ಹೊಸ ಆಯಾಮವನ್ನು ನೀಡಿ ಉತ್ತಮ ರಾಜಕಾರಣಿ ಎನಿಸಿಕೊಳ್ಳದೆ ಸಾಂಸ್ಕೃತಿಕ ವಲಯದ ಆಯಾಮವನ್ನು ಅರಿತು ಇತರರಿಗೂ ಅರ್ಥೈಸುವ ಗುರುತರ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ ಲೋಹಿಯಾ.

'ಸಮಾನತೆ' ರಾಮಮನೋಹರ ಲೋಹಿಯಾ ಅವರ ಮೂಲ ಚಿಂತನೆಗಳಲ್ಲಿ ಬಹುಮುಖ್ಯವಾದುದು. 'ಸಮಾನತೆಯಿಂದಲೇ ಮನುಕುಲದ ಏಳಿಗೆ' ಎಂಬ ಅಭಿಪ್ರಾಯವನ್ನು ಹಲವಾರು ಸಂದರ್ಭಗಳಲ್ಲಿ ವ್ಯಕ್ತಪಡಿಸಿದ್ದಾರೆ. ಸಮಾನತೆಯ ಸ್ಥಾಪನೆಯ ಬಗ್ಗೆ ಲೋಹಿಯಾ ಅವರು ವಿಸ್ತಾರವಾಗಿ ತಿಳಿಸುತ್ತಾ ಸಮಾನತೆ ಎಂಬುದು ವ್ಯಕ್ತಿ–ವ್ಯಕ್ತಿಗಳ ನಡುವೆ, ಸಮುದಾಯ–ಸಮುದಾಯಗಳ ನಡುವೆ, ಪ್ರದೇಶ–ಪ್ರದೇಶಗಳ ನಡುವೆ ಹಾಗೂ ರಾಷ್ಟ್ರ–ರಾಷ್ಟ್ರಗಳ ನಡುವೆ ಸಾಧ್ಯವಾಗಬೇಕೆಂದೂ, ಆಗಲೇ ಮನುಕುಲದ ಉನ್ನತಿ ಸಾಧ್ಯ ಎಂಬ ವಿಚಾರವನ್ನು ಮಂಡಿಸುತ್ತಾರೆ. ಲೋಹಿಯಾ ಅವರು ಸಂಪೂರ್ಣ ಸಮಾನತೆಯ ಸಮಾಜದ ನಿರ್ಮಾಣವು ಸಾಧ್ಯ ಎಂದು ಹೇಳಲಾಗದು. ಇದು ತಮ್ಮ ಕನಸು, ಹಂಬಲ ಹಾಗೂ ಸಂಕಲ್ಪ. ಆದರೆ ಅದು ಸಾಕಾರವಾದರೆ ಭಾರತ ವಿಶ್ವದ ಮುಂಚೂಣಿ ರಾಷ್ಟ್ರಗಳಲ್ಲಿ ಒಂದಾಗುವುದೆಂದು ಹೇಳುತ್ತಾರೆ.

"ಸಮಾನತೆಯೆಂಬುದು ಒಂದು ಮನೋದೃಷ್ಟಿ. ಅಂದರೆ ಅದನ್ನು ನಾವು ಯಾವಾಗಲೂ ಶಾಸನ ಅಥವಾ ತರ್ಕದ ಮೂಲಕ ಅರ್ಥ ಮಾಡಿಕೊಳ್ಳುವುದು ಸಾಧ್ಯವಿಲ್ಲ. ಜಾತಿ ಮತ್ತು ಲಿಂಗಗಳ ಆಧಾರದ ಮೇಲೆ ಜನರನ್ನು ದೂರವಿಡುವ ಮತ್ತು ಅವರ ಬಗ್ಗೆ ಪಕ್ಷಪಾತವೆಸಗುವ ಕ್ರಮಗಳು "ಶಾಸನಗಳನ್ನು ಉಲ್ಲಂಘಿಸಿಯಾದರೂ ಮತ್ತು ಅನ್ಯೆತಿಕವಾಗಿಯಾದರೂ ನಮ್ಮವರೇ ಆದ ಜನರನ್ನು ಶೋಷಿಸಿ ಹೆಚ್ಚು ಅನುಕೂಲ ಪಡೆದುಕೊಳ್ಳಬೇಕೆಂಬ ಬಲಾಢ್ಯರ ಕುತಂತ್ರಗಳನ್ನು ತೋರಿಸುತ್ತವೆ." ಎಂದು ವೈಚಾರಿಕವಾದ ಚಿಂತನೆಯನ್ನು ವ್ಯಕ್ತಪಡಿಸುತ್ತಾರೆ.

'ಮನುಷ್ಯನಲ್ಲಿ ಸ್ವಾಭಾವಿಕವಾಗಿ ಸಮಾನತೆಯ ಭಾವ ಸಂಪೂರ್ಣವಾಗಿ ಇಲ್ಲದಿದ್ದರೂ, ಮೂಲಭೂತವಾಗಿ ಇದ್ದೇ ಇರುತ್ತದೆ ಎನ್ನುವ ಲೋಹಿಯಾ, ಮನುಷ್ಯನಿಗೆ ಸಮಾನತೆ ಒಂದು ನಿಯಮವಾದಾಗ ಮಾತ್ರ ಅಸಮಾನತೆಯ ವಿರುದ್ಧ ಹೋರಾಡಬಲ್ಲ' ಎನ್ನುತ್ತಾರೆ. ಸಮಾಜದ ಸಂರಚನೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದು ಏಣಿಯ ಸ್ವರೂಪದಲ್ಲಿದೆ. ಇಲ್ಲಿ ಮೇಲು ಕೀಳು ಎಂಬ ಒಂದೇ ಮೆಟ್ಟಿಲು ಇರುವುದಿಲ್ಲ. ಭಾರತದಂತಹ ಸಮಾಜದಲ್ಲಿ ಹತ್ತು ಲಕ್ಷಕ್ಕಿಂತಲೂ ಹೆಚ್ಚಿನ ಮೆಟ್ಟಿಲುಗಳನ್ನು ನಾವು ಕಾಣಬಹುದು. ಸಮಾಜ ತುಂಬಾ ಬಡವಾದಾಗ ಸಮಾನತೆಯ ಅಗತ್ಯ ಅಷ್ಟಾಗಿ ಇರುವುದಿಲ್ಲ. ಆ ಸಂದರ್ಭದಲ್ಲಿ ಅದರ ಮೂಲ ಉದ್ದೇಶ ಕೇವಲ ಹೊಟ್ಟೆ ತುಂಬಿಸಿಕೊಳ್ಳುವುದೇ ಆಗಿರುತ್ತದೆ. ಲೋಹಿಯಾ ಅವರು ಭಾರತದಂತಹ ದೇಶವು ಅನುದಾನವನ್ನು ಅರ್ಥೈಸಿಕೊಳ್ಳುವಷ್ಟು ಸಮಾನತೆಯನ್ನು ಸುಲಭವಾಗಿ ಅರ್ಥೈಸಿಕೊಳ್ಳಲಾರದು. ಜನಸಾಮಾನ್ಯನಿಗೆ ಸಮಾನತೆಯು ಕೇವಲ ಕನಸಿನ ಅಥವಾ ಕಾಲ್ಪನಿಕವಾದದ್ದಾಗಿರುತ್ತದೆ. ಅಸಮಾನತೆಯ ಕಾರಣಗಳಲ್ಲಿ ಪ್ರಮುಖವಾದದ್ದು 'ಆರ್ಥಿಕ ಸ್ಥಿತಿಗತಿ' ಎನ್ನುವ ಲೋಹಿಯಾ, ಅಂತರ ರಾಷ್ಟ್ರೀಯಮಟ್ಟದ ಅಸಮಾನತೆಯು ಆಯಾ ದೇಶದ ಆದಾಯದ ಮೇಲೆ ನಿಂತಿ ರುತ್ತದೆ ಎನ್ನುತ್ತಾರೆ. ಹಾಗೆಯೇ ಯಜಮಾನಿಕೆ ವಹಿಸುವ ದೇಶಗಳು ದಮನಿತ ದೇಶಗಳ ಆದಾಯದ ವಿಷಯದಲ್ಲಿಯೇ ಅಸಮಾನತೆಯನ್ನು ಕಾಯ್ದುಕೊಳ್ಳುತ್ತವೆ. ಅತ್ಯಂತ ಸಾಮಾನ್ಯ ಮನುಷ್ಯನು ತನಗೆ ಬೇಕಿರುವ ಅಗತ್ಯ ವಸ್ತುಗಳ ಬಗೆಗೆ ಚಿಂತಿಸುವಾಗ ಅವನಿಗೆ ಎಲ್ಲವೂ ಅಭ್ಯಾಸವಾಗಿ, ಆ ಪರಿಸರದಲ್ಲೇ ಬದುಕುತ್ತಾನೆ. ಅಂದರೆ ಅದಕ್ಕೆ ಒಗ್ಗಿಹೋಗಿರುತ್ತಾನೆ. ಇದರಿಂದಾಗಿ ಸಮಾನತೆಯ ಚಿಂತನೆಯಿರಲಿ, ಪ್ರಶ್ನಿಸುವ ಮನೋಭಾವವನ್ನು ಕಳೆದುಕೊಳ್ಳುತ್ತಾನೆ. ಇದು ಬೆಳೆಯುತ್ತಿರುವ ರಾಷ್ಟ್ರಗಳಿಗೆ ಮಾರಕ ಎನ್ನುತ್ತಾರೆ.

"...ನ್ಯಾಯ ಮತ್ತು ಸಮಾನತೆಯು ಆದರ್ಶ ಸ್ಥಿತಿಯ ನಿರ್ಮಾಣ. ಈ ಬಗೆಯ ಆದರ್ಶ ಸ್ಥಿತಿಯ ನಿರ್ಮಾಣ ವಾಸ್ತವವಾದಿ ದೃಷ್ಟಿಕೋನದಿಂದ ಯೋಚಿಸುವ ಮನುಷ್ಯನಿಗೆ ಅಸಂಗತವಾಗಿ ಕಾಣುವುದರಲ್ಲಿ ಸಂಶಯವಿಲ್ಲ. ನಾವು ಸಮಾಜದ ಸಣ್ಣ ಪುಟ್ಟ ಅಪರಾಧಿಗಳ ಬಗ್ಗೆ ತಲೆಕೆಡಿಸಿ ಕೊಳ್ಳಬೇಕಾಗಿಲ್ಲ. ನ್ಯಾಯ ಮತ್ತು ಸಮಾನತೆ ಸ್ಥಾಪಿತವಾಗುವ ಪಕ್ಷದಲ್ಲಿ ಅಸ್ತ್ರಗಳಿಲ್ಲದೆಯೇ ಈ ಸಣ್ಣಪುಟ್ಟ ಅಪರಾಧಿಗಳನ್ನು ಆ ಸಮಾಜ ಸುಲಭವಾಗಿ ನಿಭಾಯಿಸಿಕೊಳ್ಳುತ್ತದೆ." ಎಂದು ಸಮಾನತೆಯ ಕುರಿತು ಲೋಹಿಯಾ ಹೇಳುತ್ತಾರೆ.

ಸಮಾನತೆಯು ಎಲ್ಲಾ ರಂಗಗಳಲ್ಲೂ ಅಸ್ತಿತ್ವಕ್ಕೆ ಬರಬೇಕೆನ್ನುವ ಲೋಹಿಯಾ ಅವರು ಕಾನೂನಾತ್ಮಕ ಸಮಾನತೆಯ ಬಗ್ಗೆ ತಮ್ಮ ಚಿಂತನೆಯನ್ನು ಪ್ರತಿಪಾದಿಸುತ್ತಾರೆ.

ನ್ಯಾಯಾಂಗವು ಒಂದು ಸಮಾಜದ ಅತ್ಯಂತ ಪ್ರಮುಖವಾದ ವ್ಯವಸ್ಥೆಗಳಲ್ಲಿ ಒಂದು. ಈ ವ್ಯವಸ್ಥೆಯು ಕಲುಷಿತಗೊಳ್ಳಬಾರದು ಎನ್ನುತ್ತಾರೆ. ನ್ಯಾಯಾಂಗ ವ್ಯವಸ್ಥೆಯು ಎಂದಿಗೂ ವರ್ಣ, ಜಾತಿ, ಲಿಂಗ, ಧರ್ಮ, ಮುಂತಾದವುಗಳ ಪ್ರೇರಣೆಗೆ ಒಳಗಾಗದೇ ಹಾಗೂ ಎಂತಹಾ ಸಂದರ್ಭದಲ್ಲೂ ಇವುಗಳ ಒತ್ತಡಕ್ಕೆ ಒಳಗಾಗದೇ ಪಕ್ಷಪಾತ ಮಾಡದೆ, ಪಾರದರ್ಶಕವಾಗಿ ತನ್ನ ಕಾರ್ಯವನ್ನು ನಿರ್ವಹಿಸುವುದರ ಮೂಲಕ ಸಮಾನತೆಯನ್ನು ಸ್ಥಾಪಿಸಬೇಕು. ಮುಂದುವರೆಸುತ್ತಾ ಲೋಹಿಯಾ ಅವರು 'ಹಣವಂತರ ಹಾಗೂ ಸಮಾಜದಲ್ಲಿನ ಪ್ರಭಾವಿ ವ್ಯಕ್ತಿಗಳ ಮುಷ್ಠಿಗೆ ಸಿಲುಕಬಾರದೆಂದು ಹೇಳುತ್ತಾರೆ. ಕಾನೂನು ವ್ಯವಸ್ಥೆಯು ಅಪರಾಧಗಳಿಗೆ ಸಮಾನ ಶಿಕ್ಷೆ ನೀಡಬೇಕು ಹಾಗೆಯೇ ದೇಶದ ಎಲ್ಲಾ ಪ್ರಜೆಗಳೂ ಒಂದೇ ಎಂಬಂತೆ ಪರಿಗಣಿಸಬೇಕು' ಎನ್ನುತ್ತಾರೆ.

ಕಾಲಕ್ಕೆ ಅನುಗುಣವಾಗಿ ಒಂದು ನಿರ್ದಿಷ್ಟ ಸಾಮಾಜಿಕ ಪರಿಸರಕ್ಕೆ ಅಗತ್ಯವಿರುವ ಚಿಕಿತ್ಸಕ ವಿಚಾರಗಳನ್ನು ಜೀವನ ಮೌಲ್ಯಗಳಾಗಿ ಪರಿವರ್ತಿಸುವುದರೊಂದಿಗೆ ಒಂದು ಸಾಮಾಜಿಕ ಚಿಂತನೆಗೆ ಅನುವುಮಾಡಿ ಕೊಟ್ಟಿರುವುದು ಇತಿಹಾಸದುದ್ದಕ್ಕೂ ಕಾಣಸಿಗುತ್ತದೆ. ಕನ್ನಡದ ಸಂದರ್ಭದಲ್ಲಿ ನೋಡುವುದಾದರೆ ಧರ್ಮವು ಅಂ ದಂದಿನ ಸಾಮಾಜಿಕ ಪರಿಸರಕ್ಕೆ ಅಗತ್ಯವಿರುವ ಚಿಕಿತ್ಸಕ ವಿಚಾರಗಳನ್ನು ಸಾಮಾಜಿಕ ಮೌಲ್ಯಗಳಂತೆ ಪ್ರತಿಬಿಂಬಿಸಿದೆ. ಧರ್ಮಗಳು ಹೊಸ ಚಿಕಿತ್ಸಕ ಸಂವೇದನೆಗಳನ್ನು ಧಾರ್ಮಿಕ ಚೌಕಟ್ಟಿನೊಳಗೆ ಅಳವಡಿಸಿ ಅಂದಿನ ಸಮಾಜಕ್ಕೆ ಜೀವನ ಮೌಲ್ಯಗಳಂತೆ ಬಿಂಬಿಸುತ್ತಾ ಬಂದಿದೆ. ಈ ಜೀವನ ಮೌಲ್ಯಗಳೇ ವಿಶಾಲಾರ್ಥದಲ್ಲಿ ಸಾಮಾಜಿಕ ಚಿಂತನೆಗಳಾಗಿ ಪರಿವರ್ತಿತವಾಗಿದೆ. ಸಾಹಿತ್ಯವು ಸಮಾಜದ ಪ್ರತಿಬಿಂಬವಾದುದ ರಿಂದ ಸಾಮಾಜಿಕ ಚಿಂತನೆಗಳು ಸೃಜನಶೀಲ ರಚನೆಗಳಲ್ಲಿ ಹಾಸುಹೊಕ್ಕಾಗಿ ಸೇರಿ ರಚನೆಯಾದವು. ಭಾರತವು ದಾಸ್ಯದಿಂದ ಮುಕ್ತವಾದ ಅನಂತರದ ಆದರ್ಶ ದೇಶ ಅಥವಾ ಮಾದರಿ ಸಮಾಜದ ನಿರ್ಮಾಣದ ಪರಿಕಲ್ಪನೆಯ ಕನಸು ಆ ಸಂದರ್ಭದಲ್ಲಿ ಭಾರತೀಯರಲ್ಲಿ ಹೆಪ್ಪುಗಟ್ಟಿತ್ತು. ಅಂತಹ ಕನಸನ್ನು ಕಂಡ ಸಮಸ್ತ ದೇಶ ಭ್ರಮನಿರಸನಕ್ಕೆ ಒಳಗಾಯಿತು. ಅಂದಿನ ಭಾರತೀಯ ಸಮಾಜವು ದಿಕ್ಕುಗೆಟ್ಟ ನಾವೆಯಂತಾಗಿ ಚಲಿಸತೊಡಗಿತು. ಅದರ ಪರಿಣಾಮ ಸಮಾಜದ ಎಲ್ಲಾ ಅಂಗಗಳ ಮೇಲೆ ಉಂಟಾಯಿತು. ದಾಸ್ಯತ್ವದಿಂದ ಹೊರಬಂದ ಭಾರತೀಯ ಸಮಾಜವು ಹೊಸ ಅಸ್ತಿತ್ವದ ಅನ್ವೇಷಣೆಯಲ್ಲಿ ತೊಡಗಿತ್ತು. ಸಾಮಾಜಿಕ ಚಿಂತಕರು ಪ್ರಜಾಪ್ರಭುತ್ವದ ಎಲ್ಲಾ ನೆಲೆಗಳನ್ನು ಸೂಕ್ಷ್ಮ ಶೋಧನೆಗೆ ಒಳಪಡಿಸುತ್ತಾ ಬಂದು ತಮ್ಮ ತಮ್ಮದೇ ಆದ ಚಿಕಿತ್ಸಕ ಸಂವೇದನೆಯನ್ನು ಸೂತ್ರೀಕರಿಸಿ ಹೇಳತೊಡಗಿದುದರ ಪರಿಣಾಮವಾಗಿ ಹಲವಾರು ಸಾಮಾಜಿಕ ಚಿಂತನೆಗಳು ಅಸ್ತಿತ್ವ ಪಡೆದುಕೊಂಡವು. ರಾಜಕೀಯ ಸ್ಥಿತ್ಯಂತರಗಳು

ಹಲವಾರು ಸೈದ್ಧಾಂತಿಕ ಚಳುವಳಿಗಳಿಗೆ ನಾಂದಿಹಾಡುತ್ತಾ, ಭಾರತೀಯ ಸಮಾಜದ ಮೇಲೆ ಪ್ರಭಾವ ಬೀರತೊಡಗಿದವು. ಸ್ವಾತಂತ್ರ್ಯ ಪೂರ್ವದಿಂದಲೂ ಗಾಂಧೀ ಚಿಂತನೆಯ ಪ್ರಭಾವಕ್ಕೆ ಒಳಗಾದ ಒಂದು ವರ್ಗ, ಶೋಷಣೆ ಮುಕ್ತಗೊಳಿಸುವ ಅಂಬೇಡ್ಕರ್ ಚಿಂತನೆ, ಭಾರತಕ್ಕೆ ತನ್ನದೇ ಆದ ಸಮಾಜವಾದವನ್ನು ತರುವ ಮೂಲಕ ಸಮಾನತೆಯನ್ನು ಸಾರುವ ಲೋಹಿಯಾ ಚಿಂತನೆ, ಬಂಡವಾಳಶಾಹಿಗಳ ಪರವಾಗಿದ್ದ ನೆಹರೂ ಚಿಂತನೆ, ಕಾರ್ಲ್‌ಮಾರ್ಕ್ಸ್‌ನ ಸಿದ್ಧಾಂತವನ್ನು ಪ್ರತಿಪಾದಿಸಿದ ಜಯಪ್ರಕಾಶ್ ನಾರಾಯಣ್, ಅಶೋಕ್ ಮೆಹ್ತ ಮುಂತಾದವರ ಸಮಾಜವಾದಿ ಚಿಂತನೆಗಳು ಒಂದು ಹಂತದಲ್ಲಿ ಪ್ರಭಾವ ಬೀರಿದರೆ, ಪೆರಿಯಾರ್ ವಿಚಾರಧಾರೆಗಳ ಸಂಘಟನೆಯ ಚಳುವಳಿ, ಸಮಾಜವಾದಿ ಯುವಜನ ಸಂಘಟನೆಗಳ ಚಳುವಳಿ, ರೈತಸಂಘಟನೆಗಳ ಚಳುವಳಿ, ಜಾತಿವಿನಾಶ ಸಮ್ಮೇಳನ, ಪ್ರಗತಿಪರ ಸಂಘದ ಚಳುವಳಿ ಹೀಗೆ ಹಲವಾರು ಚಿಂತನೆ ಅದರ ಮೂಲಕ ನಡೆದ ಚಳುವಳಿಗಳಲ್ಲಿ ಅಂದಿನ ಲೇಖಕರು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪಾಲ್ಗೊಂಡಿದ್ದರ ಪರಿಣಾಮ ಅವರ ಸಾಹಿತ್ಯ ರಚನೆಗಳಿಗೆ ಸಮಾಜವಾದವು ನೇರವಾಗಿ ಪ್ರಭಾವ ಬೀರತೊಡಗಿತು. ಕನ್ನಡ ಸಾಹಿತ್ಯವು ಇದಕ್ಕೆ ಹೊರತಾಗಲಿಲ್ಲ. ಈ ಸನ್ನಿವೇಶದಲ್ಲಿ ಕನ್ನಡ ಸಾಹಿತ್ಯದಲ್ಲಿ ನವ್ಯ ಪರಂಪರೆಯು ಕಾಣಿಸಿಕೊಂಡಿತು. ಕಥನ ಪರಂಪರೆಯು ಅಂದಿನ ಬಹುದೊಡ್ಡ ಸಾಹಿತ್ಯಿಕ ಅಭಿವ್ಯಕ್ತಿ ಮಾಧ್ಯಮಗಳಲ್ಲಿ ಒಂದಾಗಿದ್ದರಿಂದ ಸಹಜವಾಗಿಯೇ ಸಣ್ಣಕಥೆಗಳಲ್ಲಿ ಸಾಮಾಜಿಕ ಚಿಂತನೆಗಳ ಪ್ರಭಾವವನ್ನು ಸ್ಪಷ್ಟವಾಗಿ ಕಾಣಬಹುದು.

ನವ್ಯ ಪ್ರಕಾರದಲ್ಲಿ ಮಹತ್ವದ ಕಥಾಕೃತಿಗಳನ್ನು ನೀಡಿದವರಲ್ಲಿ ಲಂಕೇಶರು ಪ್ರಮುಖರಾಗಿದ್ದಾರೆ. ನವ್ಯ ಸಾಹಿತ್ಯದ ಪರಿಸರದಲ್ಲಿ ತಮ್ಮನ್ನು ಗುರುತಿಸಿಕೊಂಡು ಕವನ, ಕಥೆ, ಕಾದಂಬರಿ, ವಿಮರ್ಶೆ, ನಾಟಕ, ಅನುವಾದ, ಅಂಕಣ ಬರಹ ಹೀಗೆ ಹಲವಾರು ಪ್ರಕಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಹಿತ್ಯ ಕೃಷಿಯನ್ನು ಮಾಡಿರುತ್ತಾರೆ ಲಂಕೇಶ್. ಕನ್ನಡ ಪತ್ರಿಕೋದ್ಯಮದಲ್ಲಿ ತಮ್ಮ ನೇರ ನುಡಿಗಳಿಂದ ಸಾಮಾಜಿಕ ತೊಡಕುಗಳನ್ನು ಬಹಿರಂಗಗೊಳಿಸುವುದರೊಂದಿಗೆ ಕನ್ನಡ ಪತ್ರಿಕಾರಂಗಕ್ಕೆ ಹೊಸ ಸ್ವರೂಪವನ್ನು ನೀಡಿದರು. ಲಂಕೇಶ್ ಅವರು ಹಲವಾರು ಚಿತ್ರಗಳನ್ನು ನಿರ್ದೇಶಿಸುವುದರೊದಿಗೆ ರಾಷ್ಟ್ರಮಟ್ಟದಲ್ಲಿ ಕನ್ನಡ ಚಿತ್ರಗಳು ಸ್ಥಾನಪಡೆಯುವಂತೆ ಮಾಡಿದ್ದಾರೆ. ಲಂಕೇಶ್ ಅವರು 1935ರಲ್ಲಿ ಶಿವಮೊಗ್ಗದ ಕೊನಗವಳ್ಳಿಯಲ್ಲಿ ನಂದಿಬಸಪ್ಪ ಮತ್ತು ದೇವಿರಮ್ಮ ದಂಪತಿಯ ಮಗನಾಗಿ ಜನಿಸಿದರು. ಇವರ ಪ್ರಾಥಮಿಕ ವಿದ್ಯಾಭ್ಯಾಸ ಹಾರನಹಳ್ಳಿಯಲ್ಲಾದರೆ, ಇಂಟರ್ ಮೀಡಿಯೇಟ್ ಶಿಕ್ಷಣ ಶಿವಮೊಗ್ಗದಲ್ಲಾಗಿದೆ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ. ಇಂಗ್ಲೀಷ್

ಆನರ್ಸ್ ಹಾಗೂ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇಂಗ್ಲೀಷ್ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡರು.

ಲಂಕೇಶರು ತಮ್ಮ ಅನುವಾದ ಕೃತಿ ಲೋಹಿಯಾ ಅವರ ಜಾತಿ ಪದ್ಧತಿಗೆ ಬರೆದ ಮುನ್ನುಡಿಯಲ್ಲಿ 'ಸಮಾಜವಾದಿಯಾದ ಲೋಹಿಯಾ ಅವರು ತಮ್ಮ ಲಿಂಗ, ಜಾತಿ, ವರ್ಗಗಳ ಚರ್ಚೆಗೆ ತರುತ್ತಿದ್ದ ಅಪಾರ ಅನುಭವ, ಪಾಂಡಿತ್ಯ, ಪ್ರಾಮಾಣಿಕತೆ ಮತ್ತು ಮಾನವೀಯತೆ ನಮ್ಮನ್ನು ಚಕಿತಗೊಳಿಸುವುದರೊಂದಿಗೆ, ಅವರ ಚಿಂತನೆಗಳ ಮೂಲಕ ನನ್ನ ಆಲೋಚನೆ ಹಾಗೂ ಬರಹಗಳ ಮೇಲೆ ಪ್ರಭಾವವನ್ನು ಬೀರಿದ್ದಾರೆ' ಎಂದು ಹೇಳುತ್ತಾರೆ. ಲಂಕೇಶ್ ಅವರ ಕಥೆಗಳು ಅತ್ಯಂತ ಅನುಭದ ನೆಲೆಯಲ್ಲಿ ಮೂಡಿಬರುತ್ತದೆ. ಮನುಷ್ಯನ ಮೂಲಭೂತ ಪ್ರವೃತ್ತಿಯನ್ನು ಶೋಧಿಸುವುದು ಇವರ ಕತೆಗಳ ಮೂಲ ಸೆಲೆಯಾಗಿದೆ. ಭಾಷೆ ಹಾಗೂ ವಸ್ತುವಿನ ಅನುಸಂಧಾನ ಲಂಕೇಶರ ಕತೆಗಳಲ್ಲಿ ಅನನ್ಯತೆಯನ್ನು ಪಡೆದುಕೊಳ್ಳುತ್ತದೆ. ಇವರ ಹಲವಾರು ಕಥೆಗಳು ಮೇಲುನೋಟಕ್ಕೆ ಸರಳ ಎನಿಸಿದರೂ ಅತ್ಯಂತ ಗಾಢ, ತಾತ್ವಿಕ ನೆಲೆಯನ್ನು ಹೊಂದಿರುತ್ತವೆ. ಮನುಷ್ಯನ ಅಲ್ಪ ಮನೋಭಾವದ ವಿಭಿನ್ನತೆಯನ್ನು ಕಥೆಗಳು ಎತ್ತಿಹಿಡಿಯುತ್ತವೆ. ಸಾಮಾಜಿಕ ತಿಳುವಳಿಕೆಯ ಅಭಿವ್ಯಕ್ತಿ ಇವರ ಕಥೆಗಳ ಆಶಯವಾಗುವುದು ಇವರ ಕಥೆಗಳ ವಿಶೇಷತೆಯಾಗಿದೆ. ಸಾಮಾಜಿಕ ಸಿದ್ಧಾಂತಗಳು ಬದುಕಿನ ಅಂಗವೆಂಬಂತೆ ಕತೆಯನ್ನು ಹೆಣೆಯುತ್ತಾರೆ. ವ್ಯವಸ್ಥೆಯು ಪರಸ್ಪರ ಅಸಹಾಯಕತೆಯ ಸ್ಥಿತಿಯನ್ನು ಹೊಂದುವುದು ಹಾಗೆಯೇ ಅದರಿಂದ ಹತಾಷರಾಗುವ ಪಾತ್ರ ಮತ್ತು ಆ ಸನ್ನಿವೇಶದಿಂದ ಹೊರಬರುವ ಮಾರ್ಗ ಮುಂತಾದ ಸೂಕ್ಷ್ಮತೆಯು ಇವರ ಕತೆಗಳಲ್ಲಿ ಹಾಸುಹೊಕ್ಕಾಗಿದೆ. ಮುಂತಾದ ಅಂಶಗಳು ಲಂಕೇಶರ ಸೃಜನಶೀಲ ಬರವಣಿಗೆ ಅದರಲ್ಲೂ ವಿಶೇಷವಾಗಿ ಕಥೆಗಳಲ್ಲಿ ಸಾಕ್ಷಿಯಾಗಿದೆ.

ಶೈಕ್ಷಣಿಕರಂಗದ ಅಸಮಾನತೆಯನ್ನು ಕುರಿತು "ಕಾರ್ಯಕ್ರಮಗಳಿಗೆ ಅಂಟಿಕೊಂಡು 'ಸಮತ್ವ' ತಪ್ಪಿದ ಅತಿರೇಕಗಳು ಎಷ್ಟೋ ಸಲ ನನ್ನನ್ನೇ ಅಸ್ವಸ್ಥಗೊಳಿಸಿರುವುದುಂಟು. ಇದರಿಂದ ನನ್ನ ವಿಚಾರಗಳು ಸತ್ಯದ ಅನೇಕ ಮುಖಗಳೊಡನೆ ಹೊಂದಾಣಿಕೆಯಿಲ್ಲದೆ ನಿಂತು ಬಿಡುತ್ತವೋ ಎಂಬ ಸಂದೇಹ ನನ್ನನ್ನು ಕಾಡಿಸುತ್ತದೆ. ನನಗೆ ಅತ್ಯಂತ ಅಸಹ್ಯವಾದುದೆಂದರೆ ಅಸಹನೆಯೇ" ಎಂದು ಲೋಹಿಯಾ ಹೇಳುತ್ತಾರೆ. ಅಂದರೆ ಹೊರದೇಶದ ಸಿದ್ಧವಸ್ತುಗಳ ಬಗೆಗೆ ಇರುವ ಅಭಿಪ್ರಾಯ ಹಾಗೂ ವ್ಯಾಮೋಹ ಅಸಮಾನತೆಗೆ ಕಾರಣವಾಗುತ್ತದೆ. ಈ ಅಂಶವನ್ನು ವಿಸ್ತರಿಸಿ ಹೇಳುವುದಾದರೆ ಉತ್ತಮ ಬಟ್ಟೆಯಾಗಲಿ ವಸ್ತುಗಳಾಗಲಿ, ಉನ್ನತ ಶಿಕ್ಷಣವಾಗಲಿ ಯಜಮಾನ ದೇಶಗಳಲ್ಲಿ ಉನ್ನತ ಗುಣಮಟ್ಟದ್ದಾಗಿರುತ್ತವೆ

ಎಂದು ನೂರಾರು ವರ್ಷಗಳ ಕಾಲ ಪಠ್ಯಗಳಲ್ಲಿ ಹೇಳಿಕೊಡುತ್ತಾ ಬಂದಿದ್ದು; ಇದರ ಪರಿಣಾಮ ಭಾರತದಂತಹ ದೇಶದಲ್ಲಿ ಆಂತರಿಕ ಕೈಗಾರಿಕೆಗೆ ಹೂಡಿಕೆಯಾಗುವುದಿಲ್ಲ ಎನ್ನುತ್ತಾರೆ ಲೋಹಿಯಾ. ಆಳುವ ಅಂದರೆ ಯಜಮಾನಿಕೆಯ ದೇಶ ಹೇಗೆ ಹಲವಾರು ಪೀಳಿಗೆಗಳನ್ನು ಅಸಮಾನತೆಯ ಕೂಪಕ್ಕೆ ತಳ್ಳುತ್ತಾರೆ, ಹಾಗಾಗಿ ಶಿಕ್ಷಣದಲ್ಲಿನ ಪಠ್ಯಪುಸ್ತಕಗಳೂ ಸಹ ಒಂದು ದೇಶದ ಅಸಮಾನತೆಗೆ ಕಾರಣವಾಗುವುದನ್ನು ತಮ್ಮ ಚಿಂತನೆಯಲ್ಲಿ ಅಭಿವ್ಯಕ್ತಿಸುತ್ತಾರೆ.

ಲಂಕೇಶರ 'ಆಕ್ಟೋಪಸ್' ಕತೆಯು ಲೋಹಿಯಾ ಅವರ ಈ ಚಿಂತನೆಗೆ ಪೂರಕವೆಂಬಂತೆ ಒಂದಾಗಿದೆ. ಈ ಕತೆಯಲ್ಲಿ ಬರುವ ಆನಂದರಾವ್, ಪ್ರೊಫೆಸರ್ ನರಸಯ್ಯ, ಪ್ರೊಫೆಸರ್ ದೊಡ್ಡೇಗೌಡ ಹಾಗೂ ಚಿಕ್ಕೇಗೌಡರ ಪಾತ್ರಗಳಲ್ಲಿ ಕಾಣಬಹುದು. ಈ ಕಥೆಯು ಲೋಹಿಯಾ ಅವರು ಹೇಳುವ ಅಸಮಾನತೆಯು ಹಲವಾರು ಆಯಾಮಗಳನ್ನು ಹೊಂದಿದ್ದು, ಮೇಲ್ನೋಟಕ್ಕೆ ವ್ಯಕ್ತಿ ವ್ಯಕ್ತಿಗಳ ಮಧ್ಯೆ ಕಂಡುಬಂದರೂ ಆಂತರ್ಯದಲ್ಲಿ ಅದು ಒಂದು ತಾತ್ತ್ವಿಕ ನೆಲೆಯಲ್ಲಿರುವುದು ಗೋಚರಿಸುತ್ತದೆ. ಆನಂದರಾವ್ ತನ್ನ ರೀಡರ್ ಪೋಸ್ಟ್‌ಗೆ ಎಲ್ಲಾ ರೀತಿಯಲ್ಲಿಯೂ ಅರ್ಹತೆಯನ್ನು ಪಡೆದುಕೊಂಡಿದ್ದರೂ ಸಹ ವಿಶ್ವವಿದ್ಯಾಲಯದ ಕಾನೂನಿನ ಪ್ರಕಾರ ಸಂದರ್ಶನ ಹಾಗೂ ವಿಭಾಗದ ಹಿರಿಯರ ಶಿಫಾರಸ್ಸು ಪತ್ರದ ಅಗತ್ಯತೆ ಇರುತ್ತದೆ. ಈತನ ಒಂದು ಕಾಲದ ಗುರುಗಳಾದ ಪ್ರೊಫೆಸರ್ ನರಸಯ್ಯನವರು ವಿಭಾಗದ ಮುಖ್ಯಸ್ಥರಾಗಿರುತ್ತಾರೆ. ಅವರು ಇಂಗ್ಲೀಷ್ ಸಂಸ್ಕೃತಿಯನ್ನು ಪ್ರೀತಿಸುವ ವ್ಯಕ್ತಿಯಾಗಿದ್ದು, ಆನಂದರಾವ್ 'ಕನ್ನಡ ಭಾಷೆ' ಹಾಗೂ 'ಕನ್ನಡ ಸಾಹಿತ್ಯ'ದ ಪ್ರೇಮಿಯಾಗಿರುತ್ತಾನೆ. ಇವರಿಬ್ಬರ ಮಧ್ಯೆ ಕನ್ನಡ ಹಾಗೂ ಇಂಗ್ಲೀಷ್ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಹಲವಾರು ವಿಚಾರಗಳಲ್ಲಿ ಭಿನ್ನಾಭಿಪ್ರಾಯವಿರುತ್ತದೆ. ಈ ಭಿನ್ನಾಭಿಪ್ರಾಯವು ಕಾಲಕ್ರಮೇಣ ವೈಯಕ್ತಿಕ ನೆಲೆಯನ್ನು ತಲುಪಿರುತ್ತದೆ. ಸೈದ್ಧಾಂತಿಕ ಅಸಮಾನತೆಯು ಶೈಕ್ಷಣಿಕ ಬೆಳವಣಿಗೆಯಲ್ಲಿ ಅಡ್ಡಿಯಾಗುವ ಪ್ರಸಂಗ ಈ ಕಥೆಯಲ್ಲಿದೆ. ಆನಂದರಾವ್ ಶಿಫಾರಸ್ಸು ಪತ್ರವನ್ನು ತರಲು ಪ್ರೊಫೆಸರ್ ನರಸಯ್ಯ ಅವರ ಮನೆಗೆ ಹೋದಾಗ ಬಹಳ ಆತ್ಮೀಯವಾಗಿ ಮಾತನಾಡಿಸಿ ತನ್ನ ಹಿರಿಮೆಗಳನ್ನು ಹೇಳಿಕೊಂಡು ಕೊನೆಯಲ್ಲಿ "ಹುಚ್ಚನ ಹಾಗೆ ವರ್ತಿಸಬೇಡ, ಕೂತ್ಕೊ. ಈ ನೌಕರಿ, ಚಾಕರಿ ಎಲ್ಲಾ ತೀರಾ ಸಾಮಾನ್ಯ ವ್ಯಕ್ತಿಗಳಿಗೆ, ನೀನು ಮೊದಲನೇ ಸಲ ಇಂಟರ್‌ವ್ಯೂಗೆ ಬಂದಾಗಲೇ ಬೋಸ್ ಅವರಿಗೆ ನೀನು ಮಹಾವ್ಯಕ್ತಿ ಅಂತ ಗೊತ್ತಾಯ್ತು. ನಾನೂ ಅವರಿಗೆ ನಿನ್ನ ವಿಷಯ ಎಲ್ಲ ಹೇಳಿ ಎಂಥ ದೊಡ್ಡವ್ಯಕ್ತಿ ಅನ್ನೋದನ್ನ ತೋರಿಸಿದೆ. ಈ ಕಾರಣದಿಂದಾನೆ ನನ್ನ ಧರ್ಮಸಂಕಟ. ಈ ಸಂಕಟ ಸಣ್ಣದ್ದು ಎಂದು ತಿಳೀಬೇಡ" ಎಂದು ಧ್ವನಿಯನ್ನು ಚಿಕ್ಕದು ಮಾಡಿ, ನೋವಿನ,

ಸಂಕಟದ, ಕಂಬನಿಯ ಗಂಟಲಲ್ಲಿ ಮಾತಾಡತೊಡಗಿದರು. ಆನಂದುವಿಗೂ ಅವರ ಸಂಕಟ ನಿಜವೆನ್ನಿಸತೊಡಗಿತು. ನರಸಯ್ಯ ಅಳುತ್ತಾ ಹೇಳಿದರು "ಯಾರು ಏನೇ ಹೇಳಲಿ ಆನಂದು, ನೀನು ದೊಡ್ಡ ಮನುಷ್ಯ ಅಂತ ನಾ ತಿಳ್ಕೊಂಡಿದೇನೆ. ನಿನ್ನಂಥವರು ಸರಳವಾಗಿ, ಸಾಚಾ ಜೀವನ ನಡೆಸಬೇಕು. ಲಾರೆನ್ಸನ್ನ ಪ್ರೊಫೆಸರ್ ಮಾಡಿದ್ರೆ ಹೇಗೆ ಹಾಸ್ಯಾಸ್ಪದವಾಗಿರ್ತಿತ್ತು? ವರ್ಡ್ಸ್‌ವರ್ಥ್‌ನನ್ನು ರೀಡರ್ ಮಾಡಿದ್ರೆ ಹೇಗೆ ಅನ್ಯಾಯವಾಗ್ತಿತ್ತು? ಶೇಕ್ಸ್‌ಪಿಯರನ್ನ ಲೆಕ್ಚರರ್ ಮಾಡಿದ್ರೆ ಹ್ಯಾಗೆ ಸಾಹಿತ್ಯಕ್ಕೆ ಅಪಚಾರವಾಗ್ತಿತ್ತು? ಯೋಚನೆ ಮಾಡು... ದುರಂತದ ಅನುಭವ, ಮಾನವ ಕೋಟಿಗಾಗಿ ಯಾತನೆ, ಸ್ವಚ್ಛಂದವಾಗಿ ಅನುಭವಿಸುವ, ಹೇಳುವ ಅವಕಾಶ ಕಲಾವಿದನಿಗೆ ಬೇಕು. ನಾನೂ ಬೆಳಗ್ಗೆ ತಾನೇ ರಾಮಯ್ಯನವರಿಗೆ ಹೇಳ್ತಿದ್ದೆ ಇದನ್ನೆಲ್ಲ ಬಿಟ್ಟು ಹೋಗಿ ಬಿಡೋಣ ಅಂತ ಮಾಡಿದ್ದೇನೆ.... ಮೂವರೂ ಎದ್ದು ಛೇಂಬರಿನಿಂದ ಹೊರಗೆ ಬಂದರು. ಮೂವರ ಕಣ್ಣಲ್ಲೂ ನೀರಿತ್ತು. ಅವರನ್ನು ಅಲ್ಲಿಯೇ ಬಿಟ್ಟು ಆನಂದು ಗೇಟಿನವರೆಗೆ ಕಣ್ಣೀರೊರಸಿಕೊಳ್ಳುತ್ತಾ ಹೋದ. ಆಗ ನರಸಯ್ಯ, ರಾಮಯ್ಯ ಇಬ್ಬರೂ ಎತ್ತರದ ಜಗಲಿಯ ಮೇಲೆ ನಿಂತು ಮುಗುಳ್ನಗುತ್ತಾ 'ಬೈ ಬೈ' ಹೇಳುತ್ತಿದ್ದರು. ಗೇಟು ಹಾಕಿಕೊಳ್ಳುತ್ತಾ ಅವರ ಮಂದಹಾಸಕ್ಕೆ ತನ್ನ ಮಂದಹಾಸ ಬೆರಸುವಾಗ ತಾನು ಮೋಸ ಹೋದದ್ದು ಆನಂದುವಿಗೆ ಗೊತ್ತಾಯಿತು." ಈ ರೀತಿಯಲ್ಲಿ ಅಸೂಯೆಯ ಕಾರಣಕ್ಕಾಗಿ ಉಂಟಾದ ಅಸಮಾನತೆಯು ಪ್ರೊಫೆಸರ್ ನರಸಯ್ಯನವರಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಪ್ರೊಫೆಸರ್ ನರಸಯ್ಯ ಅವರು ಪ್ರೀತಿಸುವ ಇಂಗ್ಲೀಷ್ ಭಾಷೆ ಹಾಗೂ ಸಾಹಿತ್ಯವು ಎಲ್ಲಾ ಸಾಹಿತ್ಯಕ್ಕಿಂತಲೂ ಬಹಳ ಶ್ರೇಷ್ಠ. ಅಂತಹ ಶ್ರೇಷ್ಠತೆ ಕನ್ನಡದಲ್ಲಿ ಇಲ್ಲ ಎಂಬುದನ್ನು ಕತೆಯ ಹಲವು ಸಂದರ್ಭಗಳಲ್ಲಿ ಚಿತ್ರಿತವಾಗಿದೆ. ಕನ್ನಡದ ಪರ ನಿಂತು ಕನ್ನಡಕ್ಕಾಗಿಯೇ ಕೆಲಸಮಾಡುವ ಆನಂದರಾವ್ ಅವರ ಈ ವ್ಯಕ್ತಿತ್ವವನ್ನು ತಿರಸ್ಕರಿಸುವ ಹಾಗೂ ತನ್ನ ಸ್ವಂತ ಶಿಷ್ಯನಾದರೂ ಸಹ ಅವರ ಅವಕಾಶಗಳಿಗೆ ಅಡಚಣೆ ಉಂಟುಮಾಡುವ ಮನೋಭಾವದ ವ್ಯಕ್ತಿಯಾಗಿ ನರಸಯ್ಯ ಕಾಣುತ್ತಾರೆ. ಇಂಗ್ಲೀಷ್ ಹಾಗೂ ಕನ್ನಡ ಸಾಹಿತ್ಯದ ನಡುವಣದ ಮೇಲರಿಮೆ ಹಾಗೂ ಕೀಳರಿಮೆ ಅನ್ಯದೇಶ ಹಾಗೂ ಸಂಸ್ಕೃತಿಯ ಕುರಿತು ವೈಯಕ್ತಿಕವಾಗಿ ಹೊಂದಿರುವ ಅಸಮಾನತೆಯ ಪ್ರತೀಕವಾಗಿದೆ. ಈ ಕತೆಯಲ್ಲಿ ಬರುವ ಆನಂದರಾವ್ ಮೇಲೆ ಪ್ರೊಫೆಸರ್ ನರಸಯ್ಯ ಅವರು ನಡೆದುಕೊಂಡದ್ದು ಮೇಲುನೋಟಕ್ಕೆ ವ್ಯಕ್ತಿಗಳ ನಡುವಿನ ಅಸಮಾನತೆಯಂತೆ ಕಂಡರೂ ಆಂತರ್ಯದಲ್ಲಿ ಈ ಅಂಶವು ಎರಡು ಸಂಸ್ಕೃತಿಯ ನಡುವೆ ಅಂದರೆ ಹೊರದೇಶದ ಸಂಸ್ಕೃತಿಯು ಸ್ಥಳೀಯ ಸಂಸ್ಕೃತಿಯ ಮೇಲೆ ಸೃಷ್ಟಿ ಮಾಡುತ್ತಿರುವ ಅಸಮಾನತೆಯೆಂಬುದನ್ನು ಕಾಣಬಹುದಾಗಿದೆ.

ಲಂಕೇಶರ 'ಅಸ್ವಸ್ಥರು' ಕತೆಯಲ್ಲಿ ಬರುವ ಕಾಲೇಜಿನ ಉಪನ್ಯಾಸಕ ಶಂಕರನು ತನ್ನ ಹೆಂಡತಿ ಚಂಪಾ ಜೊತೆಯಲ್ಲಿ ನಡೆದುಕೊಳ್ಳುತ್ತಿದ್ದ ರೀತಿ; ಹೆಣ್ಣೆಂಬ ಕಾರಣಕ್ಕೆ ಅಸಮಾನತೆ ಮತ್ತು ಅಸಡ್ಡೆಯಿಂದ ಆಕೆಯ ವಿಷವನ್ನು ತೆಗೆದುಕೊಳ್ಳುವುದು ಲೋಹಿಯಾ ಅವರ ಚಿಂತನೆಗೆ ಪೂರಕವಾಗಿ ಕಾಣುತ್ತದೆ. ತನ್ನ ಗೆಳೆಯ ಶಿವು ಬಳಿಯಲ್ಲಿ ಮಾತನಾಡುವಾಗ "ಶಿವು ಅಂದ: ಜಗಳ ಆಯ್ತು ತಾನೆ?, ಇಲ್ಲ, ಜಗಳ ಆಡಿ ಏನು ಪ್ರಯೋಜನ ಹೇಳು. ಆಕೆ ನನ್ನನ್ನು ನಿತ್ಯ ಹಾಡಿ ಹೊಗಳಲಿ ಅಂತ ನಾನು ಮದುವೆ ಆಗ್ಲಿಲ್ಲ. ಆದ್ರೆ ನನಗನ್ನಿಸ್ತಾ ಇದೆ – ಹೆಂಗಸು ನನ್ನ ಜೊತೆ ಕೂತು ದೊಡ್ಡ ತತ್ವಜ್ಞಾನಿಯ ಹಾಗೆ ಚರ್ಚಿಸಬೇಕಾದ್ದಿಲ್ಲ: ಆದರೆ ತೆಪ್ಪಗಾದ್ರೂ ಇದ್ರೆ ಸಾಕು." ಶಂಕರನ ಈ ಮಾತುಗಳಿಂದ ತನ್ನ ಹೆಂಡತಿಯ ಬಗ್ಗೆ, ಹೆಂಗಸರ ಬಗ್ಗೆ ಇರುವಂತಹ ಕೀಳರಿಮೆಯ ಅಸಮಾನತೆಯು ಕಾಣಸಿಗುತ್ತದೆ. ಆತನಿಗೆ ತನ್ನ ಹೆಂಡತಿ ಹಾಗೂ ಅವಳ ವಿಚಾರಗಳನ್ನು ತನ್ನಷ್ಟೇ ಸಮಾನವಾಗಿ ಕಾಣುವ ಮನೋಭಾವ ಇರುವುದಿಲ್ಲ. ಮುಂದೆ ಅವರಿಬ್ಬರಲ್ಲಿ ಜಗಳವಾದಾಗ "ಹೀಗೆ ಯೋಚಿಸ್ತಾ ಕೂತಿದ್ದಾಗ, ಮೌನ ಮುರಿಯುತ್ತ, ದುಗುಡದ ಗಂಟಲಲ್ಲಿ ಚಂಪಾ ಕೇಳಿದಳು; ನೀವು ಹೀಗೆ ಐಲುಪೈಲಾಗಿ ನಡಕೊಂಡ್ರೆ ನಾನು ಸತ್ತೋಗ್ತೇನೆ – ನಾನು ಇರೋಕೆ ಸಾಧ್ಯವೇ ಇಲ್ಲ... ಸಾಯೋದು ಅಷ್ಟು ಸುಲಭ ಅಲ್ಲ ಚಂಪ. ಹಾಗೆ ಸುಲಭ ಆಗಿದ್ರೆ ನಾನು ನಿನ್ನ ಜೊತೆ ಸಂಸಾರ ಮಾಡ್ತಿದ್ದೆ ಅಂದ್ಕೊಂಡೆಯಾ? 'ನಿಮಗೆ ಸಾಯೋದ್ಕಷ್ಟ ಇರಬಹುದು.' 'ಹಾಗಾದ್ರೆ ನಿನಗೆ ಸುಲಭ ಅನ್ನು. ಮಹಾ ದಿಟ್ಟೆ!' ಈ ಮಾತಿಗೆ ಪ್ರತಿಕ್ರಿಯೆಯಾಗಿ ಚಂಪಾ ವಿಷವನ್ನು ಸೇವಿಸುತ್ತಾಳೆ. ಲೋಹಿಯಾ ಅವರು ಹೆಣ್ಣನ್ನು ಸಮಾನ ದೃಷ್ಟಿಯಿಂದ ನೋಡದ ಹೊರತು ಸಮತ್ವದ ತತ್ವ ಪೂರ್ಣವಾಗುವುದಿಲ್ಲ ಎಂದು ಹೇಳುತ್ತಾರೆ. ಅಂತೆಯೇ ಶಂಕರನು ತಾನು ವಿದ್ಯಾವಂತ ಶಿಕ್ಷಕ ಎಂಬ ಅಹಂಕಾರದಲ್ಲಿ ತನ್ನ ಪುರುಷ ಪ್ರಧಾನ ಮನೋಭಾವವನ್ನು ಬಹು ಸಂದರ್ಭಗಳಲ್ಲಿ ವ್ಯಕ್ತಪಡಿಸಿದ ಪರಿಣಾಮ ಆಕೆಯು ಆತ್ಮಹತ್ಯೆಗೆ ಪ್ರಯತ್ನಿಸಿದ್ದು ತಿಳಿಯುತ್ತದೆ. ಶಂಕರ ಆಸ್ಪತ್ರೆಯಲ್ಲಿ ಡಾಕ್ಟರ್ ಹತ್ತಿರ ತಮ್ಮ ಜಗಳವನ್ನು ಯಥಾವತ್ತಾಗಿ ತಿಳಿಸಲಾಗದೆ ಸುಳ್ಳು ಹೇಳುತ್ತಾನೆ. "ಯಾವ ವಿಷ ತಗೊಂಡೆಯಮ್ಮ? ಅಂದರು ಡಾಕ್ಟರು, 'ಡಾಲ್ಫ್' ಅಂದಳು ಚಂಪಾ. ಯಾಕೆ ತೊಗೊಂಡ್ರಿ? ಅಂದರು ಡಾಕ್ಟ್ರು. 'ಗೊತ್ತಿಲ್ಲ' ಅಂದಳು. ನಾನು ಹೇಳಿದೆ ನೋಡಿ ಸಾರ್, ತವರು ಮನೆಗೆ ಹೋಗ್ತೇನೆ. ಅಂದ್ಲು. 'ಈಗ್ಯಾಕೆ' ಅಂದೆ. ಹೋಗಲೇಬೇಕು ಅಂದ್ಲು. ಬೇಡ ಅಂದೆ. ಅದಕ್ಕೇ ವಿಷ ತಗೊಂಡ್ಬಿಟ್ಳು ಅಂದೆ, 'ಸುಳ್ಳು' ಅಂದಳು ಚಂಪಾ." ಹೀಗೆ ಚಂಪಾ ಮುಂದೆಯೂ ತನ್ನ ಅಸ್ತಿತ್ವವನ್ನು ಎತ್ತಿಹಿಡಿಯುವುದರೊಂದಿಗೆ ಸಮಾನತೆಯನ್ನು ಸ್ಥಾಪಿಸುವ ನಿರಂತರ ಪ್ರಯತ್ನ ಮಾಡುತ್ತಾಳೆ. ಲೋಹಿಯಾ ಅವರು ಹೇಳುವ ವ್ಯಕ್ತಿ–ವ್ಯಕ್ತಿಗಳ ನಡುವಿನ

ಸಮಾನತೆಯು ಆರೋಗ್ಯಕರ ಕುಟುಂಬ ಹಾಗೂ ಸಮಾಜದ ನಿರ್ಮಾಣದಲ್ಲಿ ಮುಖ್ಯ ಪಾತ್ರವಹಿಸುತ್ತದೆ ಎನ್ನುತ್ತಾರೆ.

ಲೋಹಿಯಾ ಅವರು ಸಮಾನತೆಯೇ ಸಮಾಜದ ಅಡಿಪಾಯವಾಗಬೇಕು. ಸಮಾನತೆಯನ್ನು ಸಾಧಿಸಲು ವ್ಯತಿರಿಕ್ತದಾರಿಗಳನ್ನು ಹುಡುಕುವುದರಿಂದ ಸಾಧ್ಯವಾಗದು. ಸಮಾನತೆ ಎಂಬುದು ಒಂದು ಪ್ರತಿಷ್ಠೆಯಾಗಬಾರದು ಎಂದು ಸಮಾಜವಾದದ ಮೂಲ ಧ್ಯೇಯೋದ್ದೇಶದ ಕುರಿತಾಗಿ ಹೇಳುತ್ತಾರೆ. ಈ ಚಿಂತನೆಗೆ ಪೂರಕವಾಗಿ ಲಂಕೇಶರ 'ತೋಟದವನು' ಕತೆಯು ಕಂಡು ಬರುತ್ತದೆ. ತೆಂಗಿನ ತೋಟದಲ್ಲಿ ಒಬ್ಬ ಮುದುಕ ಬಂದು ಕೆಲಸಕ್ಕೆ ಸೇರಿ ಸಾಕಷ್ಟು ತೋಟವನ್ನು ಬೆಳೆಸುತ್ತಾನೆ. ಇದರಿಂದ ಉತ್ತಮ ಇಳುವರಿ ಬಂದು ತೋಟದ ಯಜಮಾನ ಶ್ರೀಮಂತನಾಗುತ್ತಾನೆ. ಶ್ರೀಮಂತಿಕೆ ಹೆಚ್ಚಾದಂತೆಲ್ಲಾ ಅವನ ಅನಿಶ್ಚಿತ ಆಸೆಗಳೂ, ಸಂಬಂಧಗಳೂ ಹೆಚ್ಚಾದುದನ್ನು ಕಂಡ ಅವನ ಹೆಂಡತಿಗೆ ಯೋಚನೆಯಾದಾಗ ತೋಟದ ಮುದುಕ ತನ್ನ ಕತೆಯನ್ನೇ ಯಾರದೋ ಕತೆಯೆಂಬಂತೆ ಹೇಳುತ್ತಾನೆ. ತಮ್ಮಣ್ಣ ಮತ್ತು ಬಸವಯ್ಯ ಪರಸ್ಪರ ಪ್ರತಿಸ್ಪರ್ಧಿಗಳಂತೆ ಒಬ್ಬರಿಗೊಬ್ಬರು ಸಮಾನರಾಗಲು ಹವಣಿಸಿ ಅತಿಯಾಸೆಯಿಂದ ಎಲ್ಲದರಲ್ಲೂ ಪೈಪೋಟಿ ಮಾಡತೊಡಗಿದರು. ತಮ್ಮಣ್ಣನ ಆಸ್ತಿಯನ್ನು ಬಸವಯ್ಯ ಅಕ್ರಮವಾಗಿ ಪಡೆದು ಅವನನ್ನು ಕೆಳಗೆ ಬೀಳುವಂತೆ ಮಾಡುತ್ತಾನೆ. ಇದರಿಂದ ವಿಚಲಿತನಾಗದೆ ತಮ್ಮಣ್ಣ ತನ್ನಲ್ಲಿದ್ದ ಕಲೆಯನ್ನು ಬೆಳೆಸಿಕೊಂಡು ಪ್ರಖ್ಯಾತನಾಗುತ್ತಾನೆ. ಇದರಿಂದ ಅಸಹನೆಗೆ ಒಳಗಾದ ಬಸವಯ್ಯ ಅವನಿಗಿಂತ ಒಳ್ಳೆಯ ಸಂಗೀತಗಾರರನ್ನು ನೇಮಿಸಿಕೊಂಡು ಅವನಿಗಿಂತ ಹಿರಿಮೆಯನ್ನು ತೋರಿಸಲು ಅನುವಾಗುತ್ತಾನೆ. ತಮ್ಮಣ್ಣನಿಗೆ ಅನಾರೋಗ್ಯ ಉಂಟಾದಾಗ ತನ್ನ ಪ್ರತಿಷ್ಠಿತ ಬದುಕನ್ನು ಬಿಟ್ಟು ತೆಂಗಿನ ತೋಟದಲ್ಲಿ ಕೆಲಸಕ್ಕೆ ಸೇರಿಕೊಳ್ಳುವ ಮೂಲಕ ಬಸವಯ್ಯನೊಂದಿಗೆ ಸೇಡು ತೀರಿಸಿಕೊಳ್ಳುವ ಉಪಾಯ ಮಾಡುತ್ತಾನೆ. ಬಸವಯ್ಯ ಬದುಕಿನ ಹಲವು ವರ್ಷಗಳನ್ನು ಕೇವಲ ತಮ್ಮಣ್ಣನೊಂದಿಗೆ ಸಂಪತ್ತಿನ ಅಥವಾ ಪ್ರತಿಷ್ಠೆಯ ಸಮಾನತೆಯನ್ನು ಸಾಧಿಸಲು ಹೋರಾಟದಲ್ಲಿದ್ದುದರ ಪರಿಣಾಮ ತನ್ನ ಪ್ರತಿಸ್ಪರ್ಧಿಯನ್ನು ಕಳೆದುಕೊಂಡು ಬದುಕಲಾಗದೆ ಸಾವನ್ನು ಅಪ್ಪುತ್ತಾನೆ. ಹೀಗೆ ಹಲವಾರು ಸಮಾನತೆಯ ಅಂಶಗಳು ಲಂಕೇಶರ ಎಲ್ಲಾ ಬರವಣಿಗೆಯಲ್ಲಿ ಅಂದರೆ ಕಾದಂಬರಿ, ನಾಟಕ, ಕಥೆಗಳಲ್ಲಿ ನಿದರ್ಶನವಾಗಿ ಕಾಣಸಿಗುತ್ತದೆ.

**ಆಕರ ಗ್ರಂಥ:**

1. ಲಂಕೇಶ್ ಪಿ. (1992). ಸಮಗ್ರ ಕಥೆಗಳು. ಪತ್ರಿಕೆ ಪ್ರಕಾಶನ. ಬೆಂಗಳೂರು.

**ಪರಾಮರ್ಶನ ಗ್ರಂಥಗಳು:**

1. ರಾಜೇಂದ್ರ ಮೋಹನ್ ಭಟ್ನಾಕರ್. (ಅನು) ಸೌಭಾಗ್ಯಲಕ್ಷ್ಮಿ ವಿ. (2011). ಕ್ರಾಂತಿಕಾರಿ ಲೋಹಿಯಾ. ಕಾವ್ಯಶ್ರೀ ಪ್ರಕಾಶನ. ಬೆಂಗಳೂರು.
2. ಮಂಗ್ಳೂರ ವಿಜಯ (ಸಂ). (2010). ಡಾ. ರಾಮಮನೋಹರ ಲೋಹಿಯಾ ಜೀವನ ಪರಿಚಯ. ಡಾ. ರಾಮಮನೋಹರ ಲೋಹಿಯಾ ಸಮತಾ ವಿಚಾರ ಟ್ರಸ್ಟ್. ಬೆಂಗಳೂರು.
3. ರಾಜಾರಾಮ್ ತೋಳ್ಪಾಡಿ. (2011). ಮತ್ತೆ ಮತ್ತೆ ಲೋಹಿಯಾ. ಅಹರ್ನಿಶಿ ಪ್ರಕಾಶನ. ಶಿವಮೊಗ್ಗ.
4. ಪ್ರಭಾಕರ ಎ. ಎಸ್. & ಶ್ರೀಪಾದ ಶೆಟ್ಟಿ (ಸಂ). (2012). ಲೋಹಿಯಾ: ವರ್ತಮಾನದ ಮುಖಾಮುಖಿ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
5. ನಟರಾಜ್ ಹುಳಿಯಾರ್ (ಸಂ). (2008). ರಾಮಮನೋಹರ ಲೋಹಿಯಾ ಚಿಂತನೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.